The C. I. T. B. at its meeting held on 7th June 1972 has approved the transfer of the following layouts to the Corporation of the City of Bangalore. Necessary action is being taken to hand them over to the Corporation of the City of Bangalore :

1 Layout in S. Nos. 31 and 32 of Sunkenahalli.
2 Banswadi Layout (Binnamangala II Stage).
3 H. A. L. II Stage Loyout.
4 Banashankari 1st Stage.
5 Timber Yard Layout.
6 Hebbal Gangenahalli
7 Domlur 1st Stage.
8 Rajamahal Vilas Extension.

The question of handing over the "further extension of IX Block Jayanagar" is under conideration of the City Improvement Trust Board.

Change of Rules for Allotment of Sites by C.I.T.B.

332. **Sri T. R. SHAMANNA** (Fort).—

Will the Minister for Municipal Administration be pleased to state :—

whether there is any proposal before the Government to change the rules framed by the Bangalore City Improvement Trust Board regarding allotment of sites and if so, when the new rules will be ready ?

Sri B. BASAVALINGAPPA (Minister for Municipal Administration).—

Yes, the rules will be ready very soon.

ಶ್ರೀ ಟಿ. ಆರ್. ಶಾಮಣ್ಣ.—(ಬಿ) ಪ್ರಶ್ನೆಗೆ ಉತ್ತರವಾಗಿ ರೆವಿನ್ಯೂ ನಿವೇಶನಗಳನ್ನು ಹೊಂದಿದವರಿಗೆ ನಿಯಮಗಳ ಪ್ರಕಾರ ಅವರು ಅರ್ಹರಾಗಿದ್ದರೆ ನಿವೇಶನಗಳನ್ನು ಕೊಡಲಾಗುವುದು ಎಂದು ತಿಳಿಸಿದೆ. ಅಂದರೆ ಬೇರೆಯವರಿಗೆ ಕೊಡುವ ಹಾಗೆ ಇವರಿಗೂ ಕೊಡುವಿರೋ ಅಥವ ರೆವೆನ್ಯೂ ಸೈಟು ಇರುವವರಿಗೆ ಪ್ರಿಫರೆನ್ಸ್ ಕೊಡುವಿರೋ ?

† ಶ್ರೀ ಬಿ. ಬಸವಲಿಂಗಪ್ಪ.—ಇದುವರೆಗೆ ರೆವೆನ್ಯೂ ಸೈಟುಗಳನ್ನು ಹೊಂದಿರುವವರಿಗೆ ಇದುವರೆಗೆ ಬೇರೆ ಸೈಟು ಕೊಡುವ ವ್ಯವಸ್ಥೆ ಇತ್ತು. ಈಗ ಸರಕಾರದ ಹೊಸ ನೀತಿಯ ಪ್ರಕಾರ ರೂಲ್ಸ್ ಮಾಡಬೇಕೆಂದಿದೆ. ರೂಲ್ಸ್ ಮಾಡುವಾಗ ಮಾನ್ಯ ಸದಸ್ಯರ ಸಲಹೆ ಗಮನಿಸಿ ಯಾವ ರೀತಿ ಮಾಡಬೇಕೆಂಬುದನ್ನು ನಿರ್ಧಾರ ಮಾಡುತ್ತೇವೆ.

ಶ್ರೀ ಟಿ. ಆರ್. ಶಾಮಣ್ಣ.—ಈಗ ಸೈಟು ಇಲ್ಲದವರಿಗೆ ಸೈಟು ಕೊಡಬೇಕು ಎಂಬುದು ಸರಕಾರದ ಧೋರಣೆಯಾಗಿದೆ. ಬಡವರಿಗೆ ಕೊಡಲು ಸರಕಾರಕ್ಕೆ ಆಸಕ್ತಿಯಿದೆ. ಸಂತೋಷ. ಆದರೆ ಬೇರೆ ಟ್ರಸ್ಟ್‌ಬೋರ್ಡ್ ಸೈಟು ಸಿಕ್ಕಿದಿದ್ದಾಗ ಕೆಲವರು ಒಡವೆ ವಸ್ತು ಮಾರಿ ರೆವೆನ್ಯೂ ಸೈಟುಗಳನ್ನು ಕೊಂಡಿದ್ದಾರೆ. ಅಂಥ ಬಡವರಿಗೆ ಬೇರೆಯವರಿಗೆ ಸೈಟು ಕೊಡುವುದಕ್ಕೆ ಮೊದಲು ಸೈಟು ಕೊಟ್ಟು, ಮನೆ ಇಲ್ಲದ ಅವರಿಗೆ ಟ್ರಸ್ಟ್‌ಬೋರ್ಡ್ ಸೈಟು ಕೊಟ್ಟು ಅವರು ಮನೆ ಕಟ್ಟಿ ಕೊಳ್ಳಲು ಅವಕಾಶ ಮಾಡಿ ಹೆಚ್ಚು ಉಪಕಾರ ಮಾಡಬೇಕು. ಅದು ಅಗತ್ಯವಾಗಿದೆ. ಆದುದರಿಂದ ರೆವೆನ್ಯೂ ಸೈಟ್ ಹೋಲ್ಡರುಗಳಿಗೆ ಸೈಟು ಕೊಡಲು ಪ್ರಿಫರೆನ್ಸ್ ಕೊಡುವಿರಾ ?

ಶ್ರೀ ಬಿ. ಬಸವಲಿಂಗಪ್ಪ.—ಸಭಾಪತಿಗಳೇ, ಈ ಒಂದು ವಿಷಯ ಸರ್ಕಾರದ ಗಮನದಲ್ಲಿದೆ. ರೆವಿನ್ಯೂ ಸೈಟ್ ಹೋಲ್ಡರ್ಸ್ ಬೆಂಗಳೂರು ಸಿಟಿಯಲ್ಲಿ ವಾಸವಾಗಿರತಕ್ಕವರು ರೂಲ್ಸ್ ಪ್ರಕಾರ ಅರ್ಜಿಗಳನ್ನು ಹಾಕಿ ಪಡೆದುಕೊಳ್ಳತಕ್ಕದ್ದು ಒಂದು ಕ್ರಮ. ಟ್ರಸ್ಟ್‌ಬೋರ್ಡಿನಿಂದ ಅವರಿಗೆ ಜಾಗ್ರತೆ ಸೈಟು ಸಿಕ್ಕುವುದಿಲ್ಲ ಎಂದು ರೆವಿನ್ಯೂ ಭೂಮಿಯಲ್ಲಿ ಸೈಟುಗಳನ್ನು ತೆಗೆದುಕೊಂಡು ಮನೆ ಕಟ್ಟುವುದು ಬಹಳ ದಿವಸದಿಂದ ಪದ್ಧತಿ ಇದೆ. ಇದನ್ನು ಯಾವ ರೀತಿ ನಿಲ್ಲಿಸಬೇಕು, ಕೊನೆಗಾಣಿಸ ಬೇಕು ಎನ್ನುವುದು ಸರ್ಕಾರದ ಗಮನದಲ್ಲಿ ಇದೆ. ಈ ರೆವಿನ್ಯೂ ಸೈಟುಗಳನ್ನು ತೆಗೆದುಕೊಳ್ಳತಕ್ಕವರು ಟೌನ್ ಅಂಡ್ ಕಂಟ್ರಿಪ್ಲಾನಿಂಗ್ ಅಥಾರಿಟೀಸ್ ಮಾಡಿರತಕ್ಕ ರೂಲ್ಸ್ ಏನಿದೆ ಅದರ ವಿರುದ್ಧವಾಗಿ ಮನೆಗಳನ್ನು ಕಟ್ಟಿಕೊಂಡಾಗ ಏನು ಮಾಡಬೇಕೋ ಅದನ್ನು ಕಾನೂನು ಪ್ರಕಾರ ಮಾಡಬೇಕಾಗುತ್ತದೆ. ರೆವಿನ್ಯೂ ಲ್ಯಾಂಡ್ ಹೋಲ್ಡರ್ಸ್ ಯಾರಿದ್ದಾರೆ ಅವರಿಂದ ತೆಗೆದುಕೊಂಡಾಗ ಪುನಃ ಅವರಿಗೇ ಕೊಡಬೇಕೆಂಬ ಪದ್ಧತಿ ಏನಿದೆ ಇದು ಸರಿಯಲ್ಲ ಎಂದು ಅನಿಸುತ್ತದೆ. ಅವರಿಗೆ ಎನಾದರೂ ಅವಶ್ಯಕತೆ ಇದ್ದರೆ ಸರ್ಕಾರ ಪರಿಶೀಲನೆ ಮಾಡುತ್ತದೆ. ಅವಶ್ಯಕತೆ ಇದ್ದವರಿಗೆ ಕೊಡಬೇಕೆಂದು ನಾನಾಗಲೇ ಹೇಳಿದ್ದೇನೆ. ನೀಡ್ ಬೇಸ್ಡ್ ಪ್ರಿಯಾರಿಟೀಸ್ ಅಂತ ಸೈಟುಗಳನ್ನು ಹಂಚುವಾಗ ಗಮನದಲ್ಲಟ್ಟುಕೊಂಡು ರೂಲ್ಸ್ ಮಾಡುತ್ತೇವೆ ಎಂದು ಹೇಳಿದ್ದೇನೆ. ಅವರಿಗೆ ಜಾಸ್ತಿ ನೀಡ್ಸ್ ಇದ್ದರೆ ಕೊಟ್ಟೇ ಕೊಡಬೇಕಾಗುತ್ತದೆ. ಎರಡನೆಯದು ರೆವಿನ್ಯೂ ಸೈಟ್ ಹೋಲ್ಡರ್ಸ್ ಒಂದು ಸೈಟನ್ನು ತೆಗೆದುಕೊಳ್ಳುವುದಿಲ್ಲ. ಒಂದಕ್ಕಿಂತ ಜಾಸ್ತಿ ಸೈಟುಗಳನ್ನು ತೆಗೆದುಕೊಳ್ಳುತ್ತಾರೆ, ಮಾರಾಟ ಮಾಡುತ್ತಾರೆ. ಟ್ರಸ್ಟ್ ಬೋರ್ಡಿನವರು ಸೈಟುಗಳನ್ನು ಮಾಡುವುದಕ್ಕಿಂತ ಮುಂಚಿತವಾಗಿ ಬೇರೆಯವರಿಗೆ ಮಾರುತ್ತಾರೆ, ಅದರಲ್ಲಿ ವ್ಯಾಪಾರ ಮಾಡಲಕ್ಕೆ ಶುರು ಮಾಡಿರುತ್ತಾರೆ. ಅಂಥವರಿಗೆ ಏನು ಮಾಡಬೇಕೆಂಬುದು ಸರ್ಕಾರದವರ ಗಮನದಲ್ಲಿ ಇದೆ. ಅದಕ್ಕೆ ಅವಶ್ಯಕವಾದ ನಿಯಮಾವಳಿಗಳನ್ನು ಅತಿ ಶೀಘ್ರವಾಗಿ ಪ್ರಕಟಣೆ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ರೆವಿನ್ಯೂ ಸೈಟ್ ಹೋಲ್ಡರ್ಸ್ ನಡೆಸುತ್ತಾ ಇರುವಂತಹ ವ್ಯವಹಾರ ಸರಿಯಾದದ್ದಲ್ಲ ಎಂದು ಹೇಳಿದಿರಿ. ಇದರಲ್ಲಿ ಮಧ್ಯಸ್ಥಗಾರರನ್ನು ಗಮನದಲ್ಲಟ್ಟು ಹೇಳಿದ್ದರೆ ಅದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಅವರು ಬೇಕಾದಷ್ಟು ದುಡ್ಡು ಮಾಡಿಕೊಂಡಿದ್ದಾರೆ, ಮಾಡಿಕೊಂಡಿರುವುದು ನಿಜ. ಆದರೆ ಸಾವಿರಾರು ಜನ ಬಡವರು, ಕಾರ್ಮಿಕರು, ಮಧ್ಯಮವರ್ಗದವರು ಇಂತಹ ಸೈಟುಗಳನ್ನು ಕೊಂಡುಕೊಂಡಿದ್ದಾರಲ್ಲಾ ಅವನ್ನು ಅವರವರಿಗೆ ಕೊಡಬೇಕೆಂಬ ಒಂದು ಪಾಲಿಸಿಯನ್ನು ತಾವು ಒಪ್ಪಿಕೊಳ್ಳುತ್ತೀರಾ ಮತ್ತು ಅದನ್ನು ಒಪ್ಪಿಕೊಂಡರೆ ಅದಕ್ಕನುಗುಣವಾಗಿ ರೂಲ್ಸ್ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಮೊದಲೇ ಹೇಳಿದ್ದೇನೆ. ನೀಡ್ ಬೇಸ್ಡ್ ಪ್ರಯಾರಿಟೀಸ್‌ನಲ್ಲಿ ಇದು ಬಂದೇ ಬರುತ್ತದೆ. ಅದನ್ನು ಗಮನದಲ್ಲಿಟ್ಟುಕೊಂಡು ಅವಶ್ಯಕವಾದಾಗ ಯಾರು ನ್ಯಾಯವಾಗಿ ಅಲ್ಲಿ ವಾಸವಾಗಿದ್ದಾರೆ, ಬಹಳ ದಿವಸದಿಂದ ಇದ್ದಾರೆ ಮತ್ತು ಬೇರೆ ಗತಿ ಇಲ್ಲ ಅನ್ನತಕ್ಕ ಪರಿಸ್ಥಿತಿಯಲ್ಲಿ ಇದ್ದಾಗ ಅದನ್ನು ಸರ್ಕಾರ ಗಮನದಲ್ಲಟ್ಟುಕೊಳ್ಳುತ್ತದೆ.

ಶ್ರೀ ಕೆ. ಶ್ರೀರಾಮುಲು.—1965ನೇ ಸೈಟ್ ಅಲಾಟ್‌ಮೆಂಟ್ ರೂಲ್ಸ್‌ನಲ್ಲಿ ಕಾರ್ಮಿಕರಿಗೆ 5 ಪರ್ಸೆಂಟ್ ಕೊಡಬೇಕೆಂದು ತೀರ್ಮಾನ ಮಾಡಿದ್ದರಲ್ಲಾ ಅವರ ಉದ್ದೇಶವೇನು ?

ಶ್ರೀ ಬಿ. ಬಸವಲಿಂಗಪ್ಪ.— ಅದು ಹಿಂದೆ ಮಾಡಿದ್ದರು. ಈಗ ಈ ಸರ್ಕಾರ ಬಂದ ಮೇಲೆ ಆಗಲೇ ಹೇಳಿದ ಹಾಗೆ ನೀಡ್ ಬೇಸ್ಡ್ ಪ್ರಯಾರಿಟೀಸ್ ಅಂತ ಈಗಾಗಲೇ ಎರಡು ಮೂರು ಸಾರಿ ಹೇಳಿದೆ, ಅದನ್ನೇ ಪುನರುಚ್ಚಾರ ಮಾಡುತ್ತ ಇದ್ದೇನೆ ಎಂದು ತಮಗೆ ಅನಿಸಬಹುದು, ಅದನ್ನು ಗಮನದಲ್ಲಟ್ಟುಕೊಂಡು ರೂಲ್ಸ್ ಮಾಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ರೆವಿನ್ಯೂ ಸೈಟುಗಳನ್ನು ಖರೀದಿ ಮಾಡಿಕೊಳ್ಳುವುದಕ್ಕೆ ಟ್ರಸ್ಟ್ ಬೋರ್ಡಿನ ವ್ಯಾಪ್ತಿಯಲ್ಲಿ ಅವಕಾಶ ಮಾಡಿಕೊಟ್ಟಿದ್ದೀರಿ. ಒಂದು ವೇಳೆ ಟ್ರಸ್ಟ್‌ಬೋರ್ಡಿನವರೇ ಈ ರೀತಿ ಖರೀದಿ ಮಾಡಿರತಕ್ಕ ಸೈಟುಗಳನ್ನು ಕನ್‌ವರ್ಷನ್ ಮಾಡುವುದಕ್ಕೆ ಅನುಮತಿ ನೀಡಿದ್ದೀರಾ? ಆ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಹಿಂದಿನ ಟ್ರಸ್ಟ್‌ಬೋರ್ಡಿನ ನಿಯಮಾವಳಿಯನ್ನು ಏನೂ ಮಾಡಿಲ್ಲ. ಪ್ರೈವೇಟ್ ಲೇ ಔಟ್ಸ್ ಅಂತ ಬೇರೆ ಒಂದು ಚಾಪ್ಟರ್ ಇದೆ, ಆ ಪ್ರಶ್ನೆ ಕೇಳಿದರೆ ಹೇಳುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.— ಟ್ರಸ್ಟ್‌ಬೋರ್ಡ್ ನಿಯಮಾವಳಿಗಳಲ್ಲಿ ಯೋಧರು ಮತ್ತು ಮಾಜಿ ಯೋಧರಿಗೆ 5 ಪರ್ಸೆಂಟ್ ಕೊಡಬೇಕೆಂದು ಇದೆ, ಅದನ್ನು ಇದುವರೆಗೂ ಪಾಲಿಸುತ್ತಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಮುಂದಾದರೂ ಕಡ್ಡಾಯವಾಗಿ ಪಾಲಿಸುವ ಹಾಗೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಸಭಾಪತಿಗಳೇ, ಈಗ 5 ಪರ್ಸೆಂಟ್ ಅಲ್ಲ ಇನ್ನೂ ಜಾಸ್ತಿ ಮಾಡುತ್ತಾ ಇದ್ದೇವೆ, ಇದುವರೆಗೂ ಏನಿತ್ತೋ ಅದನ್ನು ಇನ್ನು ಮುಂದೆ 9 ಪರ್ಸೆಂಟ್‌ಗೆ ಏರಿಸಿ ನಂತರ ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ರೂಲ್ಸ್‌ನಲ್ಲಿ, ಆಕ್ಟ್‌ನಲ್ಲಿ ಅನೇಕ ತಿದ್ದುಪಡಿಗಳನ್ನು ತೆಗೆದುಕೊಂಡು ಬರಬೇಕೆಂದು ಸರ್ಕಾರದವರಿಗೆ ಅನೇಕ ಅರ್ಜಿಗಳನ್ನು, ಅಹವಾಲುಗಳನ್ನು ಹಾಕಿ ಕೊಂಡಿಲ್ಲವೇ? ಮತ್ತು ಅದರ ಬಗ್ಗೆ ಹೈಕೋರ್ಟಿನ ತೀರ್ಮಾನ ಆಗಿ ಆಕ್ಟ್‌ನಲ್ಲಿ ಕೆಲವು ನ್ಯೂನತೆಗಳು ಇವೆ ಅವನ್ನೂ ಕೂಡ ತಿದ್ದುಪಡಿ ಮಾಡಬೇಕೆಂದು ತಮ್ಮ ಗಮನಕ್ಕೆ ಬಂದಿದೆಯೇ? ಬಂದಿದ್ದಲ್ಲಿ ಆಕ್ಟ್‌ನ್ನು ತಿದ್ದುಪಡಿ ಮಾಡುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತಿರಾ?

ಶ್ರೀ ಬಿ. ಬಸವಲಿಂಗಪ್ಪ.—ಇದು ಮಾನ್ಯ ಸದಸ್ಯರು ಕೇಳಿತಕ್ಕ ವಿಷಯ ಸರ್ಕಾರದವರ ಗಮನಕ್ಕೆ ಬಂದಿದೆ. ಇದರ ಬಗ್ಗೆ ಹೈಕೋರ್ಟಿನವರು ಕೆಲವು ಬಾರಿ ಅವರ ತೀರ್ಮಾನ ಕೊಟ್ಟಿದ್ದಾರೆ, ಅದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ನಿಯಮಾವಳಿಗಳನ್ನು ಮಾಡುತ್ತಾ ಇದ್ದೇವೆ. ಮತ್ತು ಆಕ್ಟ್‌ನಲ್ಲಿ ಒಂದೆರಡು ಸೆಕ್ಷನ್ಸ್ ಏನಿವೆ ಅವನ್ನು ತಿದ್ದುಪಡಿ ಮಾಡಬೇಕೆಂದು ಸರ್ಕಾರದ ಗಮನದಲ್ಲಿ ಇದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ನ್ಯಾಯವಿ ಅನೇಕ ಜನ ರೆವಿನ್ಯೂ ಸೈಟ್ ಹೋಲ್ಡರ್ಸ್ ತಮ್ಮ ಸಿ ಐ ಟಿ ಬಿ ಕಾನೂನು ಪ್ರಕಾರ ಸೈಟುಗಳನ್ನು ರಚನೆ ಮಾಡಿ ತಮಗೆ ಅಪ್ರೂವರ್ ಬಗ್ಗೆ ಬಂದಾಗ ಅಪ್ರೂವ್ಡ್ ಬೈ ಟ್ರಸ್ಟ್ ಬೋರ್ಡ್ ಅಂತ ಕೊಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಪ್ರೈವೇಟ್ ಲೇ ಔಟ್ಸ್ ಅಂತ ಹೇಳುತ್ತಾರೆ, ನಿಯಮಾವಳಿಗಳು ಬರುತ್ತವೆ ಎಂದು ಹೇಳಿದ್ದೇನೆ. ಒಂದು ವಾರದಲ್ಲಿ ಪ್ರಕಟಣೆ ಮಾಡುತ್ತೇವೆ ಮಾನ್ಯ ಸದಸ್ಯರು ಅದನ್ನು ನೋಡಿಕೊಳ್ಳಬಹುದು.

ಶ್ರೀ ಟಿ. ಆರ್. ಶಾಮಣ್ಣ.—ಕಾರ್ಪೊರೇಷನ್ ಏರಿಯಾಕ್ಕೆ ಕೆಲವು ಏರಿಯಾಗಳನ್ನು ತೆಗೆದು ಕೊಳ್ಳಬೇಕೆಂದು ಹೇಳಿದ್ದೀರಿ. ಹನುಮಂತನಗರದ ಶ್ರೀನಗರ ಮತ್ತು ಸುತ್ತಮುತ್ತ ಪ್ರದೇಶದಲ್ಲಿ 31 ನೇ ಡಿವಿಜನ್ ಟ್ರಸ್ಟ್‌ಬೋರ್ಡ್ ಏರಿಯಾದಲ್ಲಿ ಎಲ್ಲ ಸಿದ್ಧತೆಗಳೂ ಆಗಿರುವುದರಿಂದ ಅದನ್ನು ಅಡಷ್ಟು ಜಾಗ್ರತೆ ಕಾರ್ಪೊರೇಷನ್‌ಗೆ ಸೇರಿಸಿಕೊಳ್ಳುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಅದು ಒಂದೇ ಅಲ್ಲ ಬೇರೆ ಲೇ ಔಟ್‌ಗಳು ಎಲ್ಲಿ ಕೊನೆ ಹಂತದಲ್ಲಿ ಇವೆ ಅವನ್ನೆಲ್ಲಾ ಕಾರ್ಪೊರೇಷನ್‌ಗೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಂ. ನಾಗಣ್ಣ.—ತಾವು 7 ನೇ ಜೂನ್ 1972 ರಲ್ಲಿ ಸಿ ಐ ಟಿ ಬಿ ಗೆ ಕೆಲವು ಲೇ ಔಟು ಗಳನ್ನು ಕಾರ್ಪೊರೇಷನ್‌ಗೆ ಕೊಡಬೇಕೆಂದು ಮಾಡಿದ್ದೇವೆ ಎಂದು ಹೇಳಿದ್ದೀರಿ. ಕಾರ್ಪೊರೇಷನ್‌ಗೆ ಕೊಡುವ ಮುನ್ನ ವಾಟರ್, ಲೈಟ್, ಸಿವರೇಜ್ ಲೈನ್, ಸಿಮೆಂಟ್ ಕಾನ್‌ಕ್ರೀಟ್ ರೋಡು ಅಥವಾ ಟಾರ್ ರೋಡು ಮಾಡಿ ಕಾರ್ಪೊರೇಷನ್‌ಗೆ ಕೊಡುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರಾದ ಶ್ರೀಮಾನ್ ನಾಗಣ್ಣನವರು ಅನುಭವಿಗಳು ಬಹಳ ದಿವಸದಿಂದ ಕಾರ್ಪೊರೇಷನ್‌ನಲ್ಲಿ ಇದ್ದವರು. ಲೇ ಔಟ್‌ಗಳನ್ನು ಕಾರ್ಪೊರೇಷನ್‌ಗೆ ಹ್ಯಾಂಡ್ ಓವರ್ ಮಾಡುವಾಗ ಎಲ್ಲವನ್ನೂ ಕೂಡ ಸಿದ್ಧತೆ ಮಾಡಿ ಕೊಡುತ್ತೇವೆ, ಅಕಸ್ಮಾತ್ತಾಗಿ ಒಂದೆರಡು ಕೆಲಸಗಳು ಆಗಲಿಲ್ಲ ಎಂದರೆ ಅದಕ್ಕೆ ತಗಲತಕ್ಕ ವೆಚ್ಚ ಏನಿದೆ ಅದನ್ನೂ ಕೂಡ ಕಾರ್ಪೊರೇಷನ್‌ಗೆ ಕೊಟ್ಟು ನೀವೇ ಮಾಡಿರಿ ಅಂತ ಅವರಿಗೆ ಹ್ಯಾಂಡ್ ಓವರ್ ಮಾಡುತ್ತೇವೆ.

Persons convicted under Untouchability Offence Act, 1956

225. Sri MALLIKARJUNA (Gurmitkal).—

Will the Minister for Community Development and Social Welfare be pleased to state :—

the number of cases registered and charge sheeted by the Police in the State during the year 1971-72 under the Untouchability Offence Act, 1956 and the number of persons convicted ?